# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು- 572 103.

**ದಿನಾಂಕ: 13.09.2024 ರಂದು ಬೆಳಿಗ್ಗೆ: 10.00 ಗಂಟೆಗೆ ಮಾನ್ಯ ಕುಲಪತಿಯವರ ಕೊಠಡಿ, ತುಮಕೂರು ವಿಶ್ವವಿದ್ಯಾನಿಲಯ, ಬಿ.ಹೆಚ್. ರಸ್ತೆ, ತುಮಕೂರು-572103 ಇಲ್ಲಿ ನಡೆದ 2024-25ನೇ ಸಾಲಿನ ಪ್ರಥಮ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳು**

**ಹಾಜರಾದ ಸದಸ್ಯರುಗಳು**

| | | |
|---|---|---|
| 1. | **ಪ್ರೊ. ವೆಂಕಟೇಶ್ವರಲು ಎಂ, ಮಾನ್ಯ ಕುಲಪತಿಗಳು** | **ಅಧ್ಯಕ್ಷರು** |
| 2. | **ಡಾ. ಶೋಭಾ,** ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | **ಸದಸ್ಯರು** |
| 3. | **ಡಾ. ಕೆ ರಾಜೀವಲೋಚನ**<br>ನಿವೃತ್ತ ತತ್ವಶಾಸ್ತ್ರ ಉಪನ್ಯಾಸಕರು, ಕೌಸ್ತುಭ 179, ದಾರುಕ ಬಡಾವಣೆ, ಜೋಗಿಮಟ್ಟಿ ರಸ್ತೆ, ಚಿತ್ರದುರ್ಗ-577501. | **ಸದಸ್ಯರು** |
| 4. | **ಶ್ರೀ ಕೆ.ಆರ್ ದೇವರಾಜ್**<br>S/o ರಾಮಾಂಜಿನಪ್ಪ, ಮನೆ ಸಂಖ್ಯೆ: 202, ಹಳೆ ಅಂಚೆ ಕಚೇರಿ ರಸ್ತೆ, ಸೂಲಿಬೆಲೆ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ-562 129 | **ಸದಸ್ಯರು** |
| 5. | **ಶ್ರೀ ಕುಮಾರಸ್ವಾಮಿ ಹೆಚ್.ಬಿ**<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಿಪಟೂರು, ತುಮಕೂರು ಜಿಲ್ಲೆ- 572201 | **ಸದಸ್ಯರು** |
| 6. | **ಪ್ರೊ. ರೇವಣಸಿದ್ದೇಶ್ವರ ಡಿ.ಆರ್**<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಡವನಹಳ್ಳಿ, ಮಧುಗಿರಿ ತಾಲ್ಲೂಕು ತುಮಕೂರು ಜಿಲ್ಲೆ-572112 | **ಸದಸ್ಯರು** |
| 7. | **ಡಾ. ಚಿತ್ತರಂಜನ್ ರೈ**<br>ಪ್ರಾಂಶುಪಾಲರು, ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜು, ತಿಪಟೂರು | **ಸದಸ್ಯರು** |
| 8. | **ಡಾ. ಜಾಯ್ ನೆರೆಲ್ಲಾ**<br>ಪ್ರಾಂಶುಪಾಲರು, ಯೂನಿಯನ್ ಕ್ರಿಶ್ಚಿಯನ್ ಕಾಲೇಜು, ಶಿರಾ ಗೇಟ್, ತುಮಕೂರು | **ಸದಸ್ಯರು** |
| 9. | **ಡಾ. ಕೊಟ್ರೇಶ್ ಎಂ.**<br>ಪ್ರಾಧ್ಯಾಪಕರು, ಸ್ನಾತಕೋತ್ತರ ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | **ಸದಸ್ಯರು** |
| 10. | **ಡಾ. ಮನೋಹರ ಶಿಂಧೆ**<br>ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | **ಸದಸ್ಯರು** |
| 11. | **ಪ್ರೊ. ಪ್ರಸನ್ನಕುಮಾರ್ ಕೆ.**<br>ಕುಲಸಚಿವರು (ಮೌಲ್ಯಮಾಪನ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | **ಸದಸ್ಯರು** |
| 12. | **ಶ್ರೀಮತಿ ನಹೀದ ಝಮ್ ಝಮ್ ಕೆ.ಎ.ಎಸ್.**<br>ಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | **ಸದಸ್ಯ ಕಾರ್ಯದರ್ಶಿ** |

**ಹಾಜರಾಗದ ಸದಸ್ಯರು**

| | | |
|---|---|---|
| 1. | **ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ** | **ಸದಸ್ಯರು** |
| 2. | **ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ** | **ಸದಸ್ಯರು** |
| 3. | **ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ** | **ಸದಸ್ಯರು** |
| 4. | **ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ** | **ಸದಸ್ಯರು** |

**ಪ್ರಸ್ತಾವನೆ:**

ದಿನಾಂಕ: 13.09.2024ರ ಶುಕ್ರವಾರ ಬೆಳಿಗ್ಗೆ 10.00 ಗಂಟೆಗೆ ಮಾನ್ಯ ಕುಲಪತಿಯವರ ಕೊಠಡಿ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇಲ್ಲಿ ನಡೆದ 2024-25ನೇ ಸಾಲಿನ ಪ್ರಥಮ ವಿಶೇಷ ಸಿಂಡಿಕೇಟ್ ಸಭೆಗೆ ಹಾಜರಾದ ಎಲ್ಲಾ ಸದಸ್ಯರುಗಳನ್ನು ಮಾನ್ಯ ಕುಲಸಚಿವರು ಆತ್ಮೀಯವಾಗಿ ಸ್ವಾಗತಿಸಿದರು. ತದನಂತರ ಸಭೆಯಲ್ಲಿ ಈ ಕೆಳಕಂಡ ಕಾರ್ಯಸೂಚಿಗಳ ಬಗ್ಗೆ ಚರ್ಚಿಸಿ ನಿರ್ಣಯಗಳನ್ನು ಕೈಗೊಳ್ಳಲಾಯಿತು.

| ಕ್ರಸಂ. | ವಿಷಯ ಸಂಖ್ಯೆ | ಕಾರ್ಯಸೂಚಿ ವಿಷಯಗಳು | ನಿರ್ಣಯಗಳು |
|---|---|---|---|
| | | **ಇಂಜಿನಿಯರಿಂಗ್ ವಿಭಾಗ** | |
| 1. | 2024-25.ವಿ.ಸಿಂ-01 ಶೈ.ವಿ-01 | ತುಮಕೂರು ವಿಶ್ವವಿದ್ಯಾನಿಲಯದ ಬಿದರಕಟ್ಟೆ ನೂತನ ಕ್ಯಾಂಪಸ್‌ನಲ್ಲಿ ಉದ್ಯೋಗಸ್ಥ ಮಹಿಳೆಯರ ಹಾಸ್ಟೆಲ್ (Working Womens Hostel) ಕಟ್ಟಡ ನಿರ್ಮಾಣ ಕಾಮಗಾರಿ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು, ಈ ಸಂಬಂಧವಾಗಿ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ತೊಂದರೆ ಉಂಟಾಗದೇ ಇರುವುದರಿಂದ ತುಮಕೂರು ವಿಶ್ವವಿದ್ಯಾನಿಲಯದ ಬಿದರಕಟ್ಟೆ ನೂತನ ಕ್ಯಾಂಪಸ್‌ನಲ್ಲಿ ಮಹಿಳಾ ಸಿಬ್ಬಂದಿ/ ಮಹಿಳಾ ಸಂಶೋಧನಾರ್ಥಿಗಳ ಭದ್ರತೆ ಮತ್ತು ಸುರಕ್ಷತೆಯ ಹಿತದೃಷ್ಟಿಯಿಂದ ರೂ.40.00 ಕೋಟಿ (ರೂಪಾಯಿ ನಲವತ್ತು ಕೋಟಿ ಮಾತ್ರ) ಗಳ ಅಂದಾಜು ವೆಚ್ಚದಲ್ಲಿ ಉದ್ಯೋಗಸ್ಥ ಮಹಿಳೆಯರ ಹಾಸ್ಟೆಲ್ (Working Womens Hostel) ಕಟ್ಟಡ ನಿರ್ಮಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| | | **ಪರೀಕ್ಷಾ ವಿಭಾಗ** | |
| 2. | 2024-25.ವಿ.ಸಿಂ-01 ಪ.ವಿ-01 | ಹದಿನೇಳನೇಯ ಘಟಿಕೋತ್ಸವ ಸಮಾರಂಭದ ವೇದಿಕೆ ನಿರ್ಮಾಣ ಮತ್ತು ಶಾಮಿಯಾನ ಹಾಗೂ ಇತರೆ ಪರಿಕರಗಳ ಹುಂಡಿಯ ಮೊತ್ತವನ್ನು ಪಾವತಿಸುವ ಕುರಿತು. | <u>ಕ್ರಮ ಸಂಖ್ಯೆ 02 ಮತ್ತು 03ರ ಕಾರ್ಯಸೂಚಿಯಲ್ಲಿನ ವಿಷಯಗಳಿಗೆ ಸಂಬಂಧಿಸಿದಂತೆ:</u><br>ತುಮಕೂರು ವಿಶ್ವವಿದ್ಯಾನಿಲಯದ ಹದಿನೇಳನೇಯ ಘಟಿಕೋತ್ಸವದ ಸಂಬಂಧ ಖರ್ಚು-ವೆಚ್ಚಗಳಲ್ಲಿ ಆಗಿರುವ ಲೋಪ-ದೋಷಗಳಿಗೆ ಸ್ಪಷ್ಟನೆ ನೀಡುವಂತೆ ಕುಲಸಚಿವರು (ಪರೀಕ್ಷಾಂಗ) ಇವರಿಗೆ ಸಭೆಯು ತಿಳಿಸಿತು.<br>ಈ ಸಂಬಂಧ, ಘಟಿಕೋತ್ಸವಕ್ಕೆ ವೆಚ್ಚವಾಗಿರುವ ಮೊತ್ತಕ್ಕೆ ಪೂರಕ ದಾಖಲೆಗಳೊಂದಿಗೆ ಸಭೆಗೆ ಮಾಹಿತಿಯನ್ನು ಹಾಗೂ ಸ್ಪಷ್ಟನೆಯನ್ನು ವಿವರಿಸುವಂತೆ ಕುಲಸಚಿವರು (ಪರೀಕ್ಷಾಂಗ) ಇವರಿಗೆ ಮಾನ್ಯ ಕುಲಪತಿಗಳು ತಿಳಿಸಿದರು.<br>ಈ ಸಂಬಂಧ, ಕುಲಸಚಿವರು (ಪರೀಕ್ಷಾಂಗ) ಇವರು ದಿನಾಂಕ 07.06.2024 ರಂದು ನಡೆದ 5ನೇ ಸಾಮಾನ್ಯ ಸಿಂಡಿಕೇಟ್ ಸಭೆಯಲ್ಲಿ ಘಟಿಕೋತ್ಸವದ ಅಂದಾಜು ಮೊತ್ತ ರೂ.50.00 ಲಕ್ಷಗಳಿಗೆ ಅನುಮೋದನೆ ಪಡೆದಿರುವುದಾಗಿ ತಿಳಿಸಿದರು.<br>ಘಟಿಕೋತ್ಸವದ ವೆಚ್ಚಕ್ಕಾಗಿ ಒಟ್ಟಾರೆಯಾಗಿ ರೂ.50.00 ಲಕ್ಷಗಳ ಅಂದಾಜು ಮೊತ್ತಕ್ಕೆ ಮಾತ್ರ ಅನುಮೋದನೆ ಪಡೆಯಲಾಗಿದ್ದು, ತದನಂತರದಲ್ಲಿ, ಘಟಿಕೋತ್ಸವದ ವಿವಿಧ ಕಾರ್ಯನಿರ್ವಹಣೆಯ ಅಂದಾಜು ವೆಚ್ಚಗಳಿಗೆ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆಯದಿರುವುದನ್ನು ಸಭೆಯು ಗಮನಿಸಿರುತ್ತದೆ ಹಾಗೂ ಘಟಿಕೋತ್ಸವದ ಖರ್ಚು-ವೆಚ್ಚದ ಸಂಬಂಧವಾಗಿ, ಮಾನ್ಯ ಕುಲಸಚಿವರು (ಪರೀಕ್ಷಾಂಗ) ಇವರು ಸಭೆಗೆ ನೀಡಿದ ಮಾಹಿತಿ ಹಾಗೂ ಹೇಳಿಕೆಗಳು |
| 3. | 2024-25.ವಿ.ಸಿಂ-01 ಪ.ವಿ-02 | ಹದಿನೇಳನೆಯ ಘಟಿಕೋತ್ಸವ ಸಮಾರಂಭದ ಊಟ ಮತ್ತು ಉಪಹಾರ, ಪ್ರಥಮ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ನೀಡುವ ಸ್ವರ್ಣ ಲೇಪಿತ ಬೆಳ್ಳಿ ಪದಕ ಮತ್ತು ಇತರೆ ಹುಂಡಿಯ ಮೊತ್ತವನ್ನು ಪಾವತಿಸುವ ಕುರಿತು. | |

| | | | |
|---|---|---|---|
| | | | ಸದಸ್ಯರುಗಳಿಗೆ ಪೂರಕ ಮಾಹಿತಿಯಾಗಿ ಕಂಡುಬರದ ಕಾರಣ ಸದರಿಯವರು ನೀಡಿದ ಸ್ಪಷ್ಟನೆಯನ್ನು ಸಿಂಡಿಕೇಟ್ ಸಭೆಯು ಒಪ್ಪಿರುವುದಿಲ್ಲ.<br>ಘಟಿಕೋತ್ಸವದ ಸಂಬಂಧ ವಿವಿಧ ಕಾರ್ಯನಿರ್ವಹಣೆಯ ಅಂದಾಜು ವೆಚ್ಚಗಳಿಗೆ, ಸಿಂಡಿಕೇಟ್ ಸಭೆಯ ಅನುಮೋದನೆ ಪಡೆಯದೇ ಕ್ರಮಗಳನ್ನು ಕೈಗೊಂಡಿರುವುದು ನಮ್ಮ ಕಡೆಯಿಂದ ತಪ್ಪಾಗಿರುವುದಾಗಿ ಸಿಂಡಿಕೇಟ್ ಸಭೆಯ ಮುಂದೆ ಮಾನ್ಯ ಕುಲಸಚಿವರು (ಪರೀಕ್ಷಾಂಗ) ಒಪ್ಪಿಗೊಂಡಿರುತ್ತಾರೆ ಹಾಗೂ ಇನ್ನು ಮುಂದೆ ಈ ರೀತಿಯಾಗದಂತೆ ನಿಯಮಾನುಸಾರ ಕಾರ್ಯ ನಿರ್ವಹಿಸುವುದಾಗಿ ಸಭೆಯಲ್ಲಿ ಮನವಿ ಮಾಡಿಕೊಂಡಿರುವ ಹಿನ್ನೆಲೆಯಲ್ಲಿ, 17ನೇ ಘಟಿಕೋತ್ಸವದ ಎಲ್ಲಾ ಖರ್ಚು-ವೆಚ್ಚಗಳನ್ನು ಪಾವತಿಸಲು ನಿಯಮಾನುಸಾರ ಕ್ರಮ ಕೈಗೊಳ್ಳಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| 4. | 2024-25.ವಿ.ಸಿಂ-01 ಪ.ವಿ-03 | ಉತ್ತರ ಪುಸ್ತಕಗಳ ಸರಬರಾಜಿಗೆ ಸಂಬಂಧಿಸಿದ ಸ್ಪಷ್ಟೀಕರಣ ನೀಡುತ್ತಿರುವ ಕುರಿತು. | ಈ ಸಂಬಂಧ ಮಾನ್ಯ ಕುಲಸಚಿವರು (ಪರೀಕ್ಷಾಂಗ) ಇವರು ಉತ್ತರ ಪುಸ್ತಕಗಳ ಸರಬರಾಜಿಗೆ ಸಂಬಂಧಿಸಿದಂತೆ ಸಿಂಡಿಕೇಟ್ ಸಭೆಗೆ ನೀಡಿದ ಸ್ಪಷ್ಟೀಕರಣವನ್ನು ಸಭೆಯು ಒಪ್ಪಿತು. |
| 5. | 2024-25.ವಿ.ಸಿಂ-01 ಪ.ವಿ-04 | ಖಾಲಿ ಅಂಕಪಟ್ಟಿಗಳ ಸರಬರಾಜಿಗೆ ಸಂಬಂಧಿಸಿದ ಸ್ಪಷ್ಟೀಕರಣ ಕುರಿತು | ಈ ಸಂಬಂಧ ಮಾನ್ಯ ಕುಲಸಚಿವರು (ಪರೀಕ್ಷಾಂಗ) ಇವರು ಖಾಲಿ ಅಂಕಪಟ್ಟಿಗಳ ಸರಬರಾಜಿಗೆ ಸಂಬಂಧಿಸಿದಂತೆ ಸಿಂಡಿಕೇಟ್ ಸಭೆಗೆ ನೀಡಿದ ಸ್ಪಷ್ಟೀಕರಣವನ್ನು ಸಭೆಯು ಒಪ್ಪಿತು.<br>ಮುಂದುವರೆದು, ಇನ್ನು ಮುಂದೆ ಯಾವುದೇ ಟೆಂಡರ್‌ನ ಮಾಹಿತಿಯನ್ನು ಟೆಂಡರ್ ಸಮಿತಿಯ ಗಮನಕ್ಕೆ ಬರುವಂತೆ ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| **ಸಿಬ್ಬಂದಿ ವಿಭಾಗ** | | | |
| 6. | 2024-25.ವಿ.ಸಿಂ-01 ಸಿ.ವಿ-01 | ಹಿರಿಯ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು ಮತ್ತು ತತ್ಸಮಾನ ವೃಂದದ ಬೋಧಕ ಸಿಬ್ಬಂದಿ ವರ್ಗದವರಿಗೆ ಪದೋನ್ನತಿ ನೀಡುವ ಬಗ್ಗೆ | ಪ್ರಾಧ್ಯಾಪಕರಿಂದ ಹಿರಿಯ ಪ್ರಾಧ್ಯಾಪಕರು Academic Level 14 to 15, ಸಹಾಯಕ ಪ್ರಾಧ್ಯಾಪಕರಿಂದ ಸಹ ಪ್ರಾಧ್ಯಾಪಕರು Academic Level 12 to 13A, ಸಹಾಯಕ ಪ್ರಾಧ್ಯಾಪಕರು Academic Level 10 to 11 & 11 to 12 ಮತ್ತು ತತ್ಸಮಾನ ವೃಂದದ ಬೋಧಕ ಸಿಬ್ಬಂದಿ ವರ್ಗದವರಿಗೆ ಪದೋನ್ನತಿ ನೀಡುವ ಸಂಬಂಧ IQAC ವಿಭಾಗ ಇವರು ಯು.ಜಿ.ಸಿ ನಿಯಮ ಮತ್ತು ವಿಶ್ವವಿದ್ಯಾನಿಲಯದ ಪರಿನಿಯಮಗಳನ್ವಯ ನಿಯಮಾನುಸಾರ ಕ್ರಮ ಕೈಗೊಂಡು ಸಲ್ಲಿಸಿರುವ ವರದಿಗಳನ್ವಯ ದಿನಾಂಕ:11.09.2024 ಮತ್ತು 12.09.2024ರಂದು ನಡೆದ ವಿವಿಧ ವಿಷಯವಾರು ಆಯ್ಕೆ ಮಂಡಳಿಗಳು ಅರ್ಹ ಬೋಧಕ ಸಿಬ್ಬಂದಿಗೆ ಸಂದರ್ಶನ ನಡೆಸಿ ಸಲ್ಲಿಸಿರುವ ವರದಿಯಲ್ಲಿನ ನಡಾವಳಿಗಳನ್ನು ಅನುಮೋದಿಸಿ, ಸದರಿ ಸಿಬ್ಬಂದಿಗಳ ಅರ್ಹತಾ |

| | | | |
|---|---|---|---|
| | | | ದಿನಾಂಕದಿಂದ ಅನ್ವಯವಾಗುವಂತೆ ಆರ್ಥಿಕ ಸೌಲಭ್ಯವನ್ನು ಪರಿಗಣಿಸಿ, ಪದೋನ್ನತಿ ನೀಡಲು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.<br>ಮುಂದುವರೆದು, ಡಾ. ಭರತ್ ಶಿಲ್ಪಿ, ಸಹಾಯಕ ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ ಇವರು ದಿನಾಂಕ: 27.07.2006 ರಿಂದ ದಿನಾಂಕ:28.07.2010ರ ವರೆಗಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿಡ್ಲಗಟ್ಟದ ಕಾಲೇಜು ಶಿಕ್ಷಣ ಇಲಾಖೆಯಲ್ಲಿನ ಸೇವಾವಧಿಯನ್ನು CAS ಪದೋನ್ನತಿಗೆ ಮಾತ್ರ ಅರ್ಹತಾ ದಿನಾಂಕದಿಂದ ಅನ್ವಯವಾಗುವಂತೆ ಪದೋನ್ನತಿ ನೀಡಲು ಹಾಗೂ ದಿನಾಂಕ 13.09.2024ರ ಸಿಂಡಿಕೇಟ್ ಸಭೆಯ ದಿನಾಂಕದಿಂದ ಅನ್ವಯವಾಗುವಂತೆ ಆರ್ಥಿಕ ಸೌಲಭ್ಯವನ್ನು ನೀಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |

## ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು

ಬೋಧಕೇತರ ಸಿಬ್ಬಂದಿಗಳ ಪದೋನ್ನತಿಗೆ ಸಂಬಂಧಿಸಿದಂತೆ ದಿನಾಂಕ 13.09.2024ರಂದು ಸಮಯ 2.30 ಗಂಟೆಗೆ ಪದೋನ್ನತಿ ಸಮಿತಿ (DPC) ನಡೆಸುವ ಮಾಹಿತಿಯನ್ನು ಮಾನ್ಯ ಕುಲಸಚಿವರು ಸಿಂಡಿಕೇಟ್ ಸಭೆಯ ಗಮನಕ್ಕೆ ತಂದರು. ಈ ಕುರಿತು ಅರ್ಹ ಬೋಧಕೇತರ ಸಿಬ್ಬಂದಿಗಳ ಪದೋನ್ನತಿಗೆ ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಲು ಸಭೆಯು ಅನುಮೋದಿಸಿತು.

| | | | |
|---|---|---|---|
| ಕುಲಸಚಿವರು (ಪರೀಕ್ಷಾಂಗ) | [signature] | ಡಾ. ಕೋಟ್ರೇಶ್.ಎಂ | [signature] |
| ಡಾ. ಕೆ ರಾಜೀವಲೋಚನ | [signature] | ಡಾ. ಮನೋಹರ್ ಶಿಂಧೆ | [signature] |
| ಶ್ರೀ ಕೆ.ಆರ್ ದೇವರಾಜ್ | [signature] | ಡಾ. ಚಿತ್ತರಂಜನ್ ರೈ | [signature] |
| ಶ್ರೀ ಕುಮಾರಸ್ವಾಮಿ ಹೆಚ್.ಬಿ. | ಸಹಿ/- | ಡಾ. ಜಾಯ್ ನೆರೆಲ್ಲಾ | [signature] |
| ಪ್ರೊ. ರೇವಣಸಿದ್ದೇಶ್ವರ ಡಿ.ಆರ್. | [signature] | ನಿರ್ದೇಶಕರು ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | |

ಮಾನ್ಯ ಕುಲಸಚಿವರು

ಮಾನ್ಯ ಕುಲಪತಿಗಳು